**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್ 131/2018**

ಡಿಡಬ್ಲ್ಯೂ -3

**ದಿನಾಂಕ 17/03/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರುಃ**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳು ನನಗೆ ತಿಳಿದಿದ್ದು ಹಾಗೂ ಅವು ಸತ್ಯವಾಗಿರುತ್ತವೆ.

**ಪಾಟಿ ಸವಾಲುಃ ವಾದಿ ಪರ ವಕೀಲರುಃ**

ವಾದಿಯ ಗಂಡ ಸಣ್ಣ ಮಲ್ಲೇಗೌಡ ನನಗೆ ಪರಿಚಯ ಮತ್ತು ನಾವು ಒಂದೇ ಗ್ರಾಮದವರು. ವಾದಿ ಪುಟ್ಟಮ್ಮ ಸಣ್ಣ ಮಲ್ಲೇಗೌಡರ ಮೊದಲ ಹೆಂಡತಿ ಎಂದರೆ ಸರಿ. ಜಯಮ್ಮ ಪುಟ್ಟಮ್ಮ ರವರ ಮಗಳು ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ಜೀವನ ಮಾಡುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳನ್ನು ಸಣ್ಣ ಮಲ್ಲೇಗೌಡರು ಖರೀದಿ ಮಾಡಿದ ಸಂದರ್ಭದಲ್ಲಿ ನಾನು ಸಾಕ್ಷಿದಾರನಾಗಿ ಸಹಿ ಮಾಡಿಲ್ಲ ಅದರ ಬಗ್ಗೆ ತಿಳಿದುಕೊಂಡಿರುತ್ತೇನೆ. ಸಣ್ಣ ಮಲ್ಲೇಗೌಡರು ಖರೀದಿ ಸಂದರ್ಭದಲ್ಲಿ ಅವರ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ಸಣ್ಣ ಮಲ್ಲೇಗೌಡರು ಖರೀದಿ ಮಾಡಿದಾಗ ವಾದಿ ಮತ್ತು ಪ್ರತಿವಾದಿಗಳು ಒಟ್ಟಿಗೆ ಇದ್ದರು. ಸಣ್ಣ ಮಲ್ಲೇಗೌಡರು ಯಾವ ದಾಖಲೆಗಳನ್ನು ಯಾರ ಹೆಸರಿಗೂ ಮಾಡದೇ ಸ್ವತ್ತುಗಳನ್ನು ಹಾಗೆಯೇ ಉಳಿಸಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಸಣ್ಣಮಲ್ಲೇಗೌಡರು ಮರಣ ಹೊಂದಿದ ನಂತರ ವಾದಿಗಳಿಗೆ ಆಸ್ತಿಗಳನ್ನು ವಿಭಾಗ ಮಾಡದೇ ಪ್ರತಿವಾದಿಗಳೇ ಸ್ವಾಧೀನ ಮತ್ತು ಅನುಭೋಗದಲ್ಲಿ ಇದ್ದಾರೆ ಎಂದರೆ ಸರಿ. ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವಂತೆ ನನಗೆ ವಾದಿ ಮತ್ತು ಪ್ರತಿವಾದಿಗಳು ಇಬ್ಬರೂ ಹೇಳಿರುತ್ತಾರೆ.

2. ದಾವಾ ಸ್ವತ್ತುಗಳಲ್ಲಿ ವಾದಿಗಳಿಗೆ ಮತ್ತು ಪ್ರತಿವಾದಿಗಳಿಗೆ ಸಮಾನ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ ಕಾನೂನು ಪ್ರಕಾರ ಬಂದರೂ ಬರಬಹುದು ಎಂದು ನುಡಿಯುತ್ತಾರೆ.

(**ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ